# ಮಕ್ಕಳಿಗಾಗಿ ಬೈಬಲ್
## ಅರ್ಪಿಸುವ

# ಗಿದ್ಯೋನನ ಸಣ್ಣ ಸೈನ್ಯ




ಬರಹಗಾರರು: Edward Hughes
ಚಿತ್ರಲೇಖಕರು: Janie Forest
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Ruth Klassen



60ರ 15ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*



**ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.**
**ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.**


ಕನ್ನಡ

Kannada



ಯಹೋಶವನು ಸತ್ತ ನಂತರ ಇಸ್ರಾಯೆಲ್ಯರು ದೇವರಿಗೆ ಅವಿಧೇಯರಾಗಿ ದೇವರನ್ನು ತೊರೆದು ಬಿಟ್ಟರು. ದೇವರು ಮಿದ್ಯಾನರ ಮೂಲಕವಾಗಿ ಇಸ್ರಾಯೆಲ್ಯರ ಹೊಲ, ಗದ್ದೆ ಮನೆಗಳನ್ನು ಸುಟ್ಟು ಹಾಕುವಂತೆ ಮಾಡಿದನು. ಇದರಿಂದ ಇಸ್ರಾಯೆಲ್ಯರು ಗುಹೆಗಳಲ್ಲಿ ತಂಗುವರಾದರು.

1



ಗಿದ್ಯೋನನು ಮಿದ್ಯಾನ್ಯರಿಗೆ ಗೊತ್ತಾಗದ ಹಾಗೆ ಅಲ್ಲಿನ ದ್ರಾಕ್ಷೆಯ ಅಲೆಯ ಮರೆಯಲ್ಲಿ ಗೋದಿಯನ್ನು ಬಡಿಯುತ್ತಿದ್ದನು, ದೇವರು ಒಂದು ಸಂದೇಶದೊಡನೆ ಗಿದ್ಯೋನನ ಬಳಿಗೆ ದೇವದೂತನನ್ನು ಕಳಿಸಿದನು.

2

ಗಿದ್ಯೋನನಿಗೆ ತನ್ನ ತಂದೆಯ ರೂಪದಲ್ಲಿ ಮಾಡಿದಂತ ಸುಳ್ಳು ದೇವರ ಸ್ವರೂಪವನ್ನು ನಾಶಪಡಿಸಿ ನಿಜ ದೇವರ ಯಜ್ಞವೇದಿಯನ್ನು ಮಾಡಬೇಕು ಎಂಬುವುದು ದೇವರ ಇಚ್ಛೇಯಾಗಿತ್ತು. ಆದರೆ ಆ ದೇಶದ ವ್ಯಕ್ತಿಗಳು ಅವನನ್ನು ಕೊಲ್ಲುವರೆಂದು ಅಂಜಿದನು. ಆದರೆ ದೇವರು ಅವನಿಗೆ ಆಜ್ಞಾಪಿಸಿದ್ದನ್ನೆ ಮಾಡಿದನು.



3

ಆ ದುಷ್ಟ ಮಿದ್ಯಾನ್ಯರ ಸೈನ್ಯಕ್ಕೆ ವಿರೋದವಾಗಿ ದೇವರು ಇಸ್ರೆಯೇಲ್ ಸೈನ್ಯವನ್ನು ಗಿದ್ಯೋನನೆ ನಡಸಬೇಕೆಂದು ದೇವರು ಬಯಸಿದನು. ಆದರೆ ಗಿದ್ಯೋನನು ಭಯ ಪಟ್ಟು ದೇವರು ತನ್ನ ಸಂಗಡ ಇದ್ದಾನೆಂದು ತಿಳಿಯಲು ಒಂದು ಗುರುತನ್ನು ಕೇಳಿದನು, ನಂತರ ಕುರಿಯ ತುಪ್ಪಟದ ರಸವನ್ನು ನೆಲದ ಮೇಲೆ ಚೆಲ್ಲಿದನು.



4



ಆ ಗುರುತು ಏನೇಂದರೆ 'ನೆಲ ಒಣಗಿ ತುಪ್ಪಟವು ಹಸಿಯಾಗಿರಲಿ ಅದರಿಂದ ನಾನು ತಿಳಿದುಕೊಳ್ಳುತ್ತೆನೆ ಇಸ್ರೆಯೇಲರನ್ನು ನೀನು ರಕ್ಷಿಸುತ್ತಿ' ಎಂದು ಹೇಳಿ, ಮುಂಜಾನೆ ನೋಡುವಾಗ ನೆಲ ಒಣಗಿತ್ತು ತುಪ್ಪಟವು ಹಸಿಯಾಗಿತ್ತು. ದೇವರು ಅವನ ಮೂಲಕವಾಗಿ ಇಸ್ರಾಯೆಲ್ಯರನ್ನು ಬಿಡಿಸುವನೆಂಬುದಾಗಿ ಇದರಿಂದ ಆತನಿಗೆ ಗೊತ್ತಾಯಿತು.

5

ಆತನು ಪುನ: ಅನುಮಾನಮಾಡಿ, ದೇವರು ಮಂಜನ್ನು ನಲದ ಮೇಲೆ ಹಾಕಿದನು ಆದರೆ ತುಪ್ಪಟದ ಮೇಲೆ ಹಾಕಲಿಲ್ಲ ಮುಂಜಾನೆ ನೋಡುವಾಗ ನೆಲ ಒಣಗಿತ್ತು ತುಪ್ಪಟವು ಹಸಿಯಾಗಿತ್ತು.



6

ಗಿದ್ಯೋನನು ೩೨೦೦೦ ಸೈನಿಕರನ್ನು ಒಟ್ಟು ಗೂಡಿಸಿದನು. ಆದರೆ ದೇವರು ೩೦೦ ಸೈನಿಕರನ್ನು ಮಾತ್ರ ಆರಿಸಿಕೊಂಡನು ಏಕೆಂದರೆ ಇಸ್ರಾಯೆಲ್ಯರು ಇದು ನಮ್ಮಿಂದ ಆಯಿತು ಎಂದು ಅಂದುಕೊಳ್ಳದೆ ಇದು ದೇವರಿಂದಲೇ ಆಯಿತು ಎಂದು ತಿಳಿಯುವಂತೆ ಮಾಡಿದನು. ದೇವರು ಮಾತ್ರ ಇಸ್ರಾಯೆಲ್ಯರ ರಕ್ಷಕ.




7

ಗಿದ್ಯೋನನು ಇನ್ನೂ ಭಯ ಪಡುವವನೆಂದು ದೇವರು ತಿಳಿದು ಮಿದ್ಯಾನ್ಯರಿಗೆ ಒಂದು ಕನಸನ್ನು ಬಿಳುವಂತೆ ಮಾಡಿದನು ಅದೇನೆಂದರೆ ಒಂದು ಜವೆಗೋದಿಯ ರೋಟ್ಟಿ ಉರುಳುತ್ತ ಮಿದ್ಯಾನ್ಯರಿರುವ ಪಾಳೆಯಕ್ಕೆ ಬಂದು ಅವರನ್ನು ನಾಶಮಾಡುವಂತ ಒಂದು ಕನಸು ಬಿತ್ತು.



8

ಅಲ್ಲಿರುವ ವ್ಯಕ್ತಿ ಹೇಳುವುದೇನೆಂದರೆ ಇದು ಗಿದ್ಯೋನನ ಕತ್ತಿಯೆ ಎಂಬುವುದು ಈ ಕನಸಿನ ಅರ್ಥವಾಗಿದೆ., ದೇವರು ನಮಗೆ ವಿರೋದವಾಗಿ ಅವರಿಗೆ ಜಯವನ್ನು ಕೊಡುವವನಾಗಿದ್ದಾನೆಂದು ಗಿದ್ಯೋನನು ತಿಳಿದುಕೊಂಡನು.



9

ಗಿದ್ಯೋನನು ರಾತ್ರಿಯಲ್ಲಿ ಎಲ್ಲರಿಗೂ ಒಂದೊಂದು ಕೊಂಬುನ್ನು ಮತ್ತು ಒಂದೊಂದು ಊರಿಯುವ ಪಂಜಡಗಿರುವ ಬರಿಕೊಡವನ್ನು ಕೊಟ್ಟು ಮಿದ್ಯಾನ್ಯರ ಸೈನೆದ ಸುತ್ತಲು ಅಕ್ರಮಿಸುವಂತೆ ತಿಳಿಸಿದನು.



10

ಗಿದ್ಯೋನನು ಆಜ್ಞೆ ಕೊಡಲು ಅವರು ಕೊಂಬುನ್ನು ಊದಿದರು ಪಂಜಡಗಿರುವ ಬರಿಕೊಡವನ್ನು ಒಡೆದರು ಅದರಿಂದ ಮಿದ್ಯಾನ್ಯರಲ್ಲಿ ಗಲಿಬಲಿಯಾಗಿ ಅವರು ಓಡಿ ಹೋದರು.



11

ಆ ಜಯವನ್ನು ಕಂಡ ಇಸ್ರಾಯೆಲ್ಯರು ಗಿದ್ಯೋನನಿಗೆ ನೀನೆ ನಮ್ಮ ಮೇಲೆ ದೊರೆಯಾಗಿರು ಎಂದು ಕೇಳಿಕೊಂಡರು. ನಾನು ನಿಮ್ಮನ್ನು ಆಳುವುದಿಲ್ಲ, ಕರ್ತನೆ ನಿಮ್ಮನ್ನೇ ಆಳುತ್ತಾನೆ ಅಂದನು. ದೇವರು ಮಾತ್ರವೇ ನಿಜವಾದ ಆಳ್ವಿಕೆಗಾರನೆಂದು ಗಿದ್ಯೋನನು ತಿಳಿದುಕೊಂಡಿದ್ದನು.



12

ಗಿದ್ಯೋನನ ಸಣ್ಣ ಸೈನ್ಯ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ನ್ಯಾಯ ಸ್ಥಾಪಕರು **6–8**

**"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."**
**ಕೀರ್ತನೆ 119:130**

**ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.**

**ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.**

**ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ 3:16**

**ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.**